**ದಿನಾಂಕ : *22-08-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : *4* ನೇ ಎದರುದಾರರ ಪರ ಶ್ರೀ ಆರ್ ಕೆ ಬಿ ವಕೀಲರಿಂದ**

ನಾನು ಈಗ ಜಕ್ಕಲಿಯಲ್ಲಿ ಇರುತ್ತೇನೆ. ನನ್ನ ಗಂಡನ ನೌಕರಿ ನನಗೆ ಬಂದಿರುತ್ತದೆ. ನನಗೆ ಪ್ರತಿ ತಿಂಗಳು 54 ಸಾವಿರ ರೂ.ಗಳ ಸಂಬಳ ಬರುತ್ತದೆ. ಹೀಗಾಗಿ ನನಗೆ ಹಣಕಾಸಿನ ತೊಂದರೆ ಈಗ ಇರುವುದಿಲ್ಲ. ಅಪಘಾತವಾದ ದಿನ ನನ್ನ ಗಂಡ ವಾಹನವನ್ನು ಚಲಾಯಿಸುತ್ತಿದ್ದ. ಅಮೀನಗಡವನ್ನು ದಾಟಿದ್ದೇವು. ನಾನು ಕಾರಿನಲ್ಲಿ ಮುಂದೆ ಕುಳಿತಿದ್ದೆ. ಅಮೀನಗಡದಿಂದ ರಕ್ಕಸಗಿಗೆ ಹೋಗುವಾಗ ರಸ್ತೆಯು ತುಂಬಾ ಅಗಲವಾಗಿರುತ್ತದೆ ಮತ್ತು ನೇರವಾಗಿ ಇರುತ್ತದೆ. ನನ್ನ ಗಂಡ ಬೇಗ ಊರನ್ನು ತಲುಪಬೇಕೆಂದು ವೇಗವಾಗಿ ಹೊರಟಿದ್ದರು ಎಂದರೆ ಸರಿಯಲ್ಲ. ಲಾರಿ ನಂ. ಕೆಎ-16 ಸಿ9342 ಇದು ನಮ್ಮ ಕಾರಿಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿ. ಸದರಿ ಲಾರಿ ಚಾಲಕನು ವೇಗವಾಗಿ ಬಂದಿರುತ್ತಾನೆ. ಲಾರಿ ಚಾಲಕನು ವೇಗವಾಗಿ ಲಾರಿಯನ್ನು ಚಲಾಯಿಸಿದ್ದರಿಂದ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿ. ಲಾರಿ ನಂ. ಕೆಎ-07 ಎ 3957 ವಾಹನವು ನಿಂತಿತ್ತು. ಲಾರಿ ನಂ. ಕೆಎ-16 ಸಿ9342 ನೇ ಚಾಲಕನು ಈ ಲಾರಿಗೂ ಕೂಡಿ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿ. ಲಾರಿ ನಂ. ಕೆಎ-07 ಎ 3957 ಈ ವಾಹನದ ಚಾಲಕ ಮತ್ತು ಕ್ಲೀನರ ರವರಿಗೆ ಗಾಯಗಳು ಆಗಿರುತ್ತವೆ ಎಂದರೆ ಸರಿ.

ಲಾರಿ ನಂ.ಕೆಎ-07 ಎ 3957 ಈ ವಾಹನವು ಅಮೀನಗಡದಿಂದ ಹುನಗುಂದಕ್ಕೆ ಬರುವಾಗ ರಸ್ತೆಯ ಬಲಭಾಗದಲ್ಲಿ ರಸ್ತೆಯ ಮೇಲೆ ಮತ್ತು ನೆಲದ ಮೇಲೆ ನಿಂತಿತ್ತು. ಅಪಘಾರವಾದ ರಸ್ತೆಯು 30 ಫೀಟ ಅಗಲ ಇರುತ್ತದೆ ಎಂದರೆ ಸರಿ. ಲಾರಿ ನಂ. ಕೆಎ-07 ಎ 3957 ಈ ವಾಹನವು 2 ವಾಹನಗಳು ಹೋಗಿ ಬರುವಷ್ಟು ಜಾಗವನ್ನು ಬಿಟ್ಟು ನಿಂತಿತ್ತು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಲಾರಿಯು ಡಾಂಬರ ರಸ್ತೆಯ ಮೇಲೆ ನಿಂತಿತ್ತು ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮನೆಯವರ ಶವಸಂಸ್ಕಾ ರ ಮತ್ತು ಶವ ಸಾಗಣೆಗೆ 50 ಸಾವಿರ ರೂ.ಗಳನ್ನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ30 ವರ್ಷ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ದಾಖಲೆಗಳನ್ನು ಹಾಜರು ಪಡಿಸದೇ ಇದ್ದರು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಗಸ್ಟ-2022 ರಲ್ಲಿನನ್ನ ಗಂಡನಿಗೆ ನಿವ್ವಳ ಸ್ಯಾಲರಿ 16,764/- ಇತ್ತು ಎಂದರೆ ಸರಿ. ನನ್ನ ಗಂಡನಿಗೆ ಭವಿಷ್ಯದಲ್ಲಿ ಒಳ್ಳೆಯ ಸಂಬಳ ಮತ್ತು ಪದೊನ್ನತಿ ಆಗುತ್ತಿತ್ತು ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಲಾರಿ ನಂ.ಕೆಎ-07 ಎ 3957 ಈ ವಾಹನ ಚಾಲಕನ ಡಿ ಎಲ್ ನ್ನು ಹಾಜರು ಪಡಿಸಿರುವುದಿಲ್ಲ. ಸದರಿ

ಚಾಲಕನಿಗೆ ಚಾಲನಾ ಪತ್ರ ಇರುವುದಿಲ್ಲ ಮತ್ತು ಸದರಿ ಲಾರಿ ಚಾಲಕನ ತಪ್ಪು ಇರದೇ ಇರುವುದರಿಂದ 4 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಅಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : 2 ನೇ ಎದರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿದ್ದು, ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.